ನಿಮ್ಮಲ್ಲೊಬ್ಬರು ವುದೂ ನಿರ್ವಹಿಸಿದ ನಂತರ ಚರ್ಮದ ಪಾದರಕ್ಷೆ ಧರಿಸಿದರೆ, ಅದನ್ನು ಧರಿಸಿಯೇ ನಮಾಝ್ ನಿರ್ವಹಿಸಲಿ. ಅದರ ಮೇಲೆ ಸವರಿಕೊಳ್ಳಲಿ. ನಂತರ ಅವರು ಬಯಸಿದರೆ ಅದನ್ನು ಕಳಚದೆಯೇ ಇರಬಹುದು. ಆದರೆ ದೊಡ್ಡ ಅಶುದ್ಧಿ ಉಂಟಾದರೆ ಹೊರತು

ಅನಸ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹನ ಸಂದೇಶವಾಹಕರು (ಅವರ
ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಿಮ್ಮಲ್ಲೊಬ್ಬರು ವುದೂ ನಿರ್ವಹಿಸಿದ ನಂತರ ಚರ್ಮದ ಪಾದರಕ್ಷೆ ಧರಿಸಿದರೆ, ಅದನ್ನು ಧರಿಸಿಯೇ ನಮಾಝ್ ನಿರ್ವಹಿಸಲಿ. ಅದರ ಮೇಲೆ ಸವರಿಕೊಳ್ಳಲಿ. ನಂತರ ಅವರು ಬಯಸಿದರೆ ಅದನ್ನು ಕಳಚದೆಯೇ ಇರಬಹುದು. ಆದರೆ ದೊಡ್ಡ ಅಶುದ್ಧಿ ಉಂಟಾದರೆ ಹೊರತು."
[صحيح] [رواه الدارقطني]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ವಿವರಿಸುವುದೇನೆಂದರೆ, ಒಬ್ಬ ಮುಸಲ್ಮಾನನು ವುದೂ ನಿರ್ವಹಿಸಿದ ನಂತರ ಚರ್ಮದ ಪಾದರಕ್ಷೆಯನ್ನು ಧರಿಸುತ್ತಾನೆ. ನಂತರ ಅವನಿಗೆ ಅಶುದ್ಧಿಯುಂಟಾಗಿ ವುದೂ ಮಾಡಬೇಕಾಗಿ ಬರುತ್ತದೆ. ಆಗ ಅವನು ಬಯಸಿದರೆ, ಅವುಗಳ ಮೇಲೆ ಸವರಿದರೆ ಸಾಕು. ಅವನು ಅವುಗಳನ್ನು ಧರಿಸಿಯೇ ನಮಾಝ್ ನಿರ್ವಹಿಸಬಹುದು. ಒಂದು ನಿರ್ದಿಷ್ಟ ಅವಧಿಯ ತನಕ ಅವನು ಅವುಗಳನ್ನು ಕಳಚಬೇಕಾಗಿಲ್ಲ. ಆದರೆ ಅವನಿಗೆ ದೊಡ್ಡ ಅಶುದ್ಧಿ (ಜನಾಬತ್) ಉಂಟಾದರೆ ಅವನು ಅವುಗಳನ್ನು ಕಳಚಿ ಸ್ನಾನ ಮಾಡುವುದು ಅನಿವಾರ್ಯವಾಗಿದೆ.

http://www.sunnah.global/hadeeth/kn/show/8392